ಕರ್ನಾಟಕ ಸರ್ಕಾರ
ಸಮಗ್ರ ಮಕ್ಕಳ ರಕ್ಷಣಾ ಯೋಜನೆ

ಸಂ:ಕೆಎಸ್ಐಸಿಪಿಎಸ್/ಜೆಸಿಎಲ್/ಜೆಜೆಬಿ/ಮೂ.ಸೌ/2020-21

**ನಿರ್ದೇಶನಾಲಯ**
**ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಯೋಜನೆ**
**ಬೆಂಗಳೂರು.** ದಿನಾಂಕ:20.08.2020

ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು
ಜಿಲ್ಲಾ ಮಕ್ಕಳ ರಕ್ಷಣಾ ಘಟಕ,
30 ಜಿಲ್ಲೆಗಳು.

ಮಾನ್ಯರೆ,

ವಿಷಯ: ಬಾಲನ್ಯಾಯ ಮಂಡಳಿಗಳಿಗಳಿಗೆ ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕಾಗಿರುವ ಬಗ್ಗೆ.
ಉಲ್ಲೇಖ: ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಪಿಟಿಷನ್ 10208/2018 & ಸರ್ವೋಚ್ಚ ನ್ಯಾಯಾಲಯದ ರಿಟ್ ಪಿಟಿಷನ್ ಸಂ.(ಸಿವಿಲ್) 4/2020ರಲ್ಲಿ ಸೂಚಿಸಿರುವಂತೆ.

. . . . .

ಮೇಲೆನ ವಿಷಯಕ್ಕೆ ಸಂಬಂಧಿಸಿದಂತೆ, ಬಾಲನ್ಯಾಯ ಮಂಡಳಿಗಳಿಗೆ ಒದಗಿಸಬೇಕಾಗಿರುವ ಮೂಲಭೂತ ಸೌಕರ್ಯಗಳ ಕುರಿತು ದಿನಾಂಕ:19.08.2020ರಂದು ಮಾನ್ಯ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳ ಅಧ್ಯಕ್ಷತೆಯಲ್ಲಿ ನಡೆದ ಹೈ ಲೆವೆಲ್ ಕಮಿಟಿ ಸಭೆಯಲ್ಲಿ ಚರ್ಚಿಸಲಾಯಿತು. ಈ ಕುರಿತು ಕೆಲವು ಜಿಲ್ಲೆಗಳಲ್ಲಿ ಬಾಲನ್ಯಾಯ ಮಂಡಳಿಗಳ ನಡವಳಿಗಳನ್ನು ಆನ್‌ಲೈನ್ ಮೂಲಕ ನಡೆಸಲು ಅವಶ್ಯವಿರುವ ಮೂಲಭೂತ ಸೌಕರ್ಯಗಳು ಇಲ್ಲದಿರುವುದಾಗಿ ತಿಳಿದುಬಂದಿರುತ್ತದೆ.

ದಿನಾಂಕ:20.08.2020ರಂದು ಬೆಂಗಳೂರು(ನಗರ)ದ ಬಾಲನ್ಯಾಯ ಮಂಡಳಿಗೆ ಕೆಳಕಂಡ ಸಹಿದಾರರು ಇ-ಆಡಳಿತ ಇಲಾಖೆಯ ತಾಂತ್ರಿಕ ಸಲಹೆಗಾರರೊಂದಿಗೆ ಭೇಟಿ ನೀಡಿ ಬಾಲನ್ಯಾಯ ಮಂಡಳಿಯ ಅಧ್ಯಕ್ಷರೊಂದಿಗೆ ಈ ಬಗ್ಗೆ ಕೂಲಂಕುಷವಾಗಿ ಚರ್ಚಿಸಲಾಗಿದೆ. ಅದರಂತೆ ಕೆಳಕಂಡ ಉಪಕರಣಗಳನ್ನು ತುರ್ತಾಗಿ ಎಲ್ಲಾ ಬಾಲನ್ಯಾಯ ಮಂಡಳಿ ಹಾಗೂ ವೀಕ್ಷಣಾಲಯಗಳಲ್ಲಿ ಲಭ್ಯವಿರುವಂತೆ ಕ್ರಮ ಕೈಗೊಳ್ಳುವುದು ಅವಶ್ಯವೆಂದು ನಿರ್ಧರಿಸಲಾಯಿತು.

| | | |
|---|---|---|
| 1) | All in one desktop with Camera fecility<br>Winows operating system license<br>4 GB Ram<br>1.7Ghg | One in JJB & one in Observation Home |
| 2) | Additional Mic & Speaker facility | |
| 3) | Software VC application with license | |
| 4) | Hotspot(Dongle) | |
| 5) | UPS minimum 4 hours backup | |
| 6) | Laptop | |
| 7) | 65 inches or above display unit | |
| 8) | System & Printer | |

F/Director ICPS/ICPS office Note

ಈ ಉಪಕರಣಗಳನ್ನು ಕೆಟಿಪಿಪಿ ಕಾಯ್ದೆ ಅನುಸಾರ ತಕ್ಷಣ ಖರೀದಿಸಲು ಹಾಗೂ ಬಾಲನ್ಯಾಯ ಮಂಡಳಿ ಮತ್ತು ವೀಕ್ಷಣಾಲಯಗಳಲ್ಲಿ ಅಳವಡಿಸಲು ಅನುವಾಗುವಂತೆ ಕ್ರಮಕೈಗೊಂಡು, ಅನುಪಾಲನಾ ವರದಿಯನ್ನು 10 ದಿನಗಳೊಳಗೆ ನಿರ್ದೇಶನಾಲಯಕ್ಕೆ ಕಳುಹಿಸಲು ಈ ಮೂಲಕ ಕೋರಿದೆ.

ಒಂದು ವೇಳೆ ಬಾಲನ್ಯಾಯ ಮಂಡಳಿಗಳ ನಡವಳಿಗಳನ್ನು ಆನ್‌ಲೈನ್ ಮೂಲಕ ನಡೆಸಲು ಅವಶ್ಯವಿರುವ ಮೇಲೆ ತಿಳಿಸಿರುವ ಉಪಕರಣಗಳನ್ನು ಒಳಗೊಂಡಂತೆ ಮೂಲಭೂತ ಸೌಕರ್ಯಗಳು ಈಗಾಗಲೇ ಲಭ್ಯವಿದ್ದಲ್ಲಿ ಸದರಿ ಜಿಲ್ಲೆಗಳಿಂದಲೂ ಸಹ ಎಲ್ಲಾ ಉಪಕರಣಗಳು ಲಭ್ಯವಿರುವ ಬಗ್ಗೆ ಅನುಪಾಲನಾ ವರದಿಯನ್ನು ನಿರ್ದೇಶನಾಲಯಕ್ಕೆ ಕಳುಹಿಸಲು ಕೋರಿದೆ.

ತಮ್ಮ ವಿಶ್ವಾಸಿ,

20.08.2020

ನಿರ್ದೇಶಕರು
ಸಮಗ್ರ ಮಕ್ಕಳ ರಕ್ಷಣಾ ಯೋಜನೆ
ಬೆಂಗಳೂರು.

ಪ್ರತಿಯನ್ನು:-

1) ಕಾರ್ಯದರ್ಶಿಗಳು, ಕರ್ನಾಟಕ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು ರವರಿಗೆ ಮಾಹಿತಿಗಾಗಿ.
2) ಎಲ್ಲಾ ಬಾಲನ್ಯಾಯ ಮಂಡಳಿಗಳಿಗೆ ಮಾಹಿತಿಗಾಗಿ.
3) ಎಲ್ಲಾ ಜಿಲ್ಲೆಗಳ ಉಪ ನಿರ್ದೇಶಕರುಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರುಗಳಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
4) ಎಲ್ಲಾ ಜಿಲ್ಲೆಗಳ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಇವರುಗಳಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.

F/Director ICPS/ICPS office Note